ಶ್ರೀ ಬಸವರಾಜ ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ

ಆ) ಆರ್.ಐ.ಡಿ.ಎಫ್–10 ರಡಿ 10 ಸರ್ಕಾರಿ ಪ್ರೌಢಶಾಲೆಗಳಿಗೆ ಒಟ್ಟು 33 ಕೊಠಡಿಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ.
ಆರ್.ಐ.ಡಿ.ಎಫ್–12 ರಡಿ ನಾಲ್ಕು ಗ್ರಾಮಗಳ ಸರ್ಕಾರಿ ಪ್ರೌಢಶಾಲೆಗಳಿಗೆ ತಲಾ 5 ಕೊಠಡಿಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲಾಗಿದೆ.
ಆದ್ಯತೆ ಮೇರೆಗೆ ಕೊಠಡಿಗಳ ನಿರ್ಮಾಣಕ್ಕೆ ಆರ್.ಐ.ಡಿ.ಎಫ್–13 ರಡಿಯೂ ಕೊಠಡಿಗಳ ನಿರ್ಮಾಣಕ್ಕೆ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) 2007–08 ನೇ ಸಾಲಿನ ಪಂಚ ಸೌಲಭ್ಯದಡಿ 860.00 ಲಕ್ಷ ರೂಗಳನ್ನು ಒದಗಿಸಲಾಗಿದ್ದು, ಅದರಲ್ಲಿ ಆದ್ಯತೆಯನ್ನು ಅನುಸರಿಸಿ, ಪ್ರೌಢಶಾಲೆಗಳಿಗೆ ಕುಡಿಯುವ ನೀರು ಮತ್ತು ಶೌಚಾಲಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು. ಅನುದಾನದ ಲಭ್ಯತೆಯನ್ನು ಆಧರಿಸಿ ಕಾಂಪೌಂಡ್ ನಿರ್ಮಿಸಲು ಸಹ ಅನುದಾನವನ್ನು ಬಿಡುಗಡೆ ಮಾಡಲಾಗುವುದು.

2041 (2491) ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ–ಸವಣೂರು ತಾಲ್ಲೂಕುಗಳಲ್ಲಿ ಗ್ರಾಮ ಪಂಚಾಯತಿಯ ಗ್ರಾಮ ಸಭೆಗಳಲ್ಲಿ ಮಂಜೂರಾದ 2006–07 ನೇ ಸಾಲಿನ ಆಶ್ರಯ ಯೋಜನೆಯಡಿಯಲ್ಲಿ ಆಯ್ಕೆಯಾದ ಫಲಾನುಭವಿಗಳನ್ನು ಜಾಗೃತಾ ಸಮಿತಿ ಅನುಮೋದನೆ ಪಡೆಯುವುದಕ್ಕಿಂತ ಪೂರ್ವದಲ್ಲಿಯೇ ಫಲಾನುಭವಿಗಳು ಕಟ್ಟಡ ನಿರ್ಮಾಣ ಮಾಡುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಬಾರದೇ ಇದ್ದಲ್ಲಿ, ಸಾಕಷ್ಟು ಗ್ರಾಮ ಪಂಚಾಯತಿಗಳಲ್ಲಿ ಖಾಲಿ ನಿವೇಶನ ಇಲ್ಲದೆ, ಮೊದಲೇ ನಿರ್ಮಾಣ ಮಾಡಿರುವ ಹಾಗೂ ಅರ್ಧ ಕಾಮಗಾರಿ ಆಗಿರುವಂತಹ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದು ಸರ್ಕಾರದ ಗಮನದಲ್ಲಿದೆಯೇ;

ಇ) ಶಿಗ್ಗಾಂವ–ಸವಣೂರು ತಾಲ್ಲೂಕುಗಳಲ್ಲಿರುವ ಕೊಳಚೆ ಪ್ರದೇಶಗಳ ಸಂಖ್ಯೆ ಎಷ್ಟು (ಗ್ರಾಮವಾರ ಮಾಹಿತಿ ಒದಗಿಸುವುದು);

ಈ) ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗುತ್ತಿದೆ;

ಊ) ಶಿಗ್ಗಾಂವ ಹಾಗೂ ಸವಣೂರು ಪಟ್ಟಣಗಳಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ನಿವೇಶನ ಹಾಗೂ ಮನೆಗಳ ಹಂಚಿಕೆ ಮಾಡದೇ ಇರುವುದು ನಿಜವೇ;

ಋ) ಹಾಗಿದ್ದಲ್ಲಿ, ಕರ್ನಾಟಕ ಗೃಹ ನಿರ್ಮಾಣ ಮಂಡಳಿಯಿಂದ ನಿವೇಶನ ಹಾಗೂ ಮನೆಗಳ ಹಂಚಿಕೆ ಯಾವಾಗ ಮಾಡಲಾಗುವುದು?

ಶ್ರೀ ಡಿ.ಟಿ. ಜಯಕುಮಾರ್ (ವಸತಿ ಸಚಿವರು) :

ಅ) 2006–07 ನೇ ಸಾಲಿನ ಆಶ್ರಯ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯ್ತಿಗಳ ಗ್ರಾಮ ಸಭೆಗಳಲ್ಲಿ ಆಯ್ಕೆಯಾದ ಫಲಾನುಭವಿಗಳು ಜಾಗೃತಿ ಸಮಿತಿ ಅನುಮೋದನೆ ಪಡೆಯುವುದಕ್ಕಿಂತ ಪೂರ್ವದಲ್ಲಿಯೇ ಕಟ್ಟಡ ನಿರ್ಮಾಣ ಮಾಡಿರುವುದಿಲ್ಲ.

ಆ) ಗ್ರಾಮ ಪಂಚಾಯ್ತಿಗಳಲ್ಲಿ ಖಾಲಿ ನಿವೇಶನ ಇಲ್ಲದೆಯೇ ಮೊದಲೇ ಅರ್ಧ ನಿರ್ಮಾಣ ಮಾಡಿದಂತಹ ಫಲಾನುಭವಿಗಳನ್ನು ಆಯ್ಕೆ ಮಾಡಿರುವುದಿಲ್ಲ.

ಇ) ಶಿಗ್ಗಾಂವ ಮತ್ತು ಸವಣೂರು ಪಟ್ಟಣಗಳ ಪುರಸಭಾ ವ್ಯಾಪ್ತಿಯಲ್ಲಿ 8 ಘೋಷಿತ ಕೊಳಚೆ ಪ್ರದೇಶಗಳಿರುತ್ತವೆ.

ಶಿಗ್ಗಾಂವ ಪಟ್ಟಣದಲ್ಲಿ :

1) ಹರಿಜನಕೇರಿ
2) ಕುಂಚಿಕೊರವರ ಓಣಿ
3) ಹೊಸೂರ್ ಪ್ಲಾಟ್ ಮತ್ತು
4) ವಿದ್ಯಾಗಿರಿ

ಸವಣೂರು ಪಟ್ಟಣದಲ್ಲಿ :

1) ವಡ್ಡರ ಓಣಿ
2) ಅಂಬೇಡ್ಕರ್‌ನಗರ
3) ದೂರ್‌ಭೋವಿ ಓಣಿ
4) ಲಾಲ್ಸನ್ ಕಟ್ಟೆ

ಈ) ಸರ್ಕಾರ ಮಂಡಳಿಗೆ ಬಿಡುಗಡೆ ಮಾಡುವ ಹಣದ ಲಭ್ಯತೆ ಆಧರಿಸಿ, ಈ ಪ್ರದೇಶಗಳಲ್ಲಿ ಅವಶ್ಯವಾಗಿರುವ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದು.

ಉ) ಶಿಗ್ಗಾಂವ ತಾಲ್ಲೂಕಿನ ಬಂಕಾಪುರ ಪಟ್ಟಣದಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ 100 ವಸತಿ ಯೋಜನೆಯಡಿ ವಸತಿ ಬಡಾವಣೆಯನ್ನು ನಿರ್ಮಿಸಲಾಗಿದ್ದು ನಿವೇಶನ ಹಾಗೂ ಮನೆಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗಿರುತ್ತದೆ. ಸವಣೂರು ಪಟ್ಟಣದಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ವಸತಿ ಯೋಜನೆಗಾಗಿ 5 ಎಕರೆ 24 ಗುಂಟೆ ಜಮೀನುಗಳನ್ನು ಖರೀದಿ ಮಾಡಲಾಗಿದ್ದು 2007–08 ನೇ ಸಾಲಿನಲ್ಲಿ ವಸತಿ

ಯೋಜನೆಯನ್ನು ಹಮ್ಮಿಕೊಳ್ಳಲಾಗುವುದು. ಶಿಗ್ಗಾಂವ್ ಪಟ್ಟಣದಲ್ಲಿ ವಸತಿ ಯೋಜನೆಯನ್ನು ಕೈಗೊಳ್ಳುವ ಕುರಿತಂತೆ ವಸತಿ ಯೋಜನೆಗಾಗಿ ಜಮೀನುಗಳನ್ನು ಗುರುತಿಸಲಾಗಿದ್ದು ಕರ್ನಾಟಕ ಗೃಹ ಮಂಡಳಿಯಿಂದ ಸದರಿ ಜಮೀನುಗಳನ್ನು ಖರೀದಿಸುವ ಕುರಿತಂತೆ ಕ್ರಮ ಕೈಗೊಳ್ಳಲಾಗುವುದು.

ಊ) ಶಿಗ್ಗಾಂವ ಹಾಗೂ ಸವಣೂರು ಪಟ್ಟಣಗಳಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ 2007–08 ನೇ ಸಾಲಿನಲ್ಲಿ ವಸತಿ ಯೋಜನೆಯನ್ನು ಕೈಗೊಂಡು ಪೂರ್ಣಗೊಳಿಸಿದ ನಂತರ ಅರ್ಹ ಅರ್ಜಿದಾರರಿಗೆ ನಿವೇಶನ ಹಾಗೂ ಮನೆಗಳನ್ನು ಮಂಡಳಿಯಿಂದ ನಿಯಮದಂತೆ ಹಂಚಿಕೆ ಮಾಡಲಾಗುವುದು.

2050 (2509) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) :– ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಯು ಸೇರಿದಂತೆ ರಾಜ್ಯಾದ್ಯಂತ ಆಶ್ರಯ ಯೋಜನೆಯಡಿ ಹಂಚಿಕೆ ಮಾಡಿರುವ ವಸತಿ ಗೃಹಗಳು ಹಾಗೂ ನಿವೇಶನಗಳ ಸಂಖ್ಯೆ ಎಷ್ಟು;

2) ಹಿಂದುಳಿದ ಗಡಿ ಪ್ರದೇಶ ಚಾಮರಾಜನಗರ ಜಿಲ್ಲೆಗೆ ಹೊಸದಾಗಿ ಆಶ್ರಯ ಮನೆ ಮತ್ತು ನಿವೇಶನಗಳನ್ನು ಮಂಜೂರು ಮಾಡಲಾಗುವುದೇ;

3) ಈಗಾಗಲೇ ಚಾಮರಾಜನಗರ ಜಿಲ್ಲೆಗೆ ಎಷ್ಟು ಮನೆಗಳನ್ನು ಹಾಗೂ ನಿವೇಶನಗಳನ್ನು ಮಂಜೂರು ಮಾಡಲಾಗಿದೆ (ವಿವರ ನೀಡುವುದು)

ಶ್ರೀ ಡಿ.ಟಿ. ಜಯಕುಮಾರ (ವಸತಿ ಸಚಿವರು):

1) ರಾಜ್ಯದಾದ್ಯಂತ ಆಶ್ರಯ ಯೋಜನೆಯಡಿ 2003–04 ರಿಂದ 2006–07 ರವರೆವಿಗೆ 805027 ಮನೆಗಳ ಗುರಿಯನ್ನು ನೀಡಲಾಗಿದೆ. ಅದೇ ರೀತಿ ಆಶ್ರಯ ನಿವೇಶನ ಯೋಜನೆಯಡಿ 2003–04 ರಿಂದ ಇಲ್ಲಿಯವರೆವಿಗೆ 28417 ನಿವೇಶನಗಳನ್ನು ಹಂಚಲಾಗಿದೆ.

ಶ್ರೇಣಿವಾರು ವಿವರಗಳನ್ನು ಅನುಬಂಧ **"ಅ"** ದಲ್ಲಿ ಲಗತ್ತಿಸಿದೆ.

2) ಈಗಾಗಲೇ ಕೊಟ್ಟಿರುವ ಗುರಿಯನ್ನು ಸಾಧಿಸಲಾದ ನಂತರ ಹೊಸ ಗುರಿಯನ್ನು ಕೊಡಲಾಗುವುದು